ಈ) ಗಂಗಾವತಿ ಮುಖ್ಯ ಮಾರುಕಟ್ಟೆ ಪ್ರಾಂಗಣವು ಒಟ್ಟು 164 ಎಕರೆ ವಿಸ್ತೀರ್ಣವು ಹೊಂದಿದೆ. ವಿವಿಧ ಪೇಟೆ ಕಾರ್ಯಕರ್ತರು ಹಾಗೂ ಸಂಘ ಸಂಸ್ಥೆಗಳಿಗೆ ವ್ಯಾಪಾರ ಚಟುವಟಿಕೆಗಳಿಗೆ ನಿವೇಶನ ಹಂಚಿಕೆ ಮಾಡಿದ್ದು ಪ್ರಸ್ತುತ 406 ನಿವೇಶನಗಳು ಹಂಚಿಕೆಗೆ ಲಭ್ಯವಿದ್ದು, ಹಂಚಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಭತ್ತ ಉತ್ಪನ್ನದ ಬಿತ್ತನೆಯಿಂದ ಮಾರಾಟದವರೆಗೆ ಅಗತ್ಯವಾಗುವ ಎಲ್ಲಾ ಸೌಕರ್ಯಗಳನ್ನು ರೈತರಿಗೆ ಕಲ್ಪಿಸುವುದು ಮತ್ತು ಉಪ ಉತ್ಪನ್ನಗಳ ಪ್ರಯೋಜನಗಳನ್ನು ಸ್ಥಳೀಯವಾಗಿ ಬಳಸಿಕೊಳ್ಳುವ ಉದ್ದೇಶದಿಂದ ರೈಸ್ ಟೆಕ್ನಾಲಜಿ ಪಾರ್ಕ್ ಯೋಜನೆ ರೂಪಿಸಿದೆ. ನವಲಿ ಹಾಗೂ ಸೋಮನಾಳ ಭಾಗದ ವ್ಯಾಪ್ತಿಯಲ್ಲಿ 330.17 ಎಕರೆ ಸರ್ಕಾರಿ ಜಮೀನು ಹಾಗೂ 140.20 ಎಕರೆ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆ ಮೂಲಕ ಪಡೆಯಲು ಪ್ರಸ್ತಾವವಿದ್ದು, ಪರಿಶೀಲನೆಯಲ್ಲಿದೆ. ಆದ್ದರಿಂದ, ಈ ಉದ್ದೇಶಕ್ಕಾಗಿ ಪ್ರಸ್ತುತ ಸಮಿತಿಯ ಪ್ರಾಂಗಣದಲ್ಲಿ ಇರುವ ಸ್ಥಳಾವಕಾಶದಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗೆ ಪೂರಕವಾಗಿರುವುದಿಲ್ಲ.

ಉ) ಭತ್ತ ಮತ್ತು ಅಕ್ಕಿ ಉತ್ಪನ್ನಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಕಾರಟಗಿಯಲ್ಲಿ ಸ್ಥಾಪಿಸುವ ಸಂಬಂಧ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿದ್ದು ಅಂತಿಮ ತೀರ್ಮಾನ ಕೈಗೊಳ್ಳುವ ಸಂಬಂಧ ಬಂದಿರುವ ಆಕ್ಷೇಪಣೆ ಹಾಗೂ ಸಲಹೆಗಳ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

## ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ

**537 (654) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) :** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಿದ್ದ ಅನುದಾನವೆಷ್ಟು? ಇಲ್ಲಿಯವರೆಗೆ ಈ ಇಲಾಖೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಆ) ಅಪೆಂಡಿಕ್ಸ್–ಇ ಎಂದರೇನು? ಇದನ್ನು ಸಿದ್ದಪಡಿಸುವ ಉದ್ದೇಶವೇನು; ಅಪೆಂಡಿಕ್ಸ್–ಇ ಇಲ್ಲದೆ ಇಲಾಖೆಯವರು ವೆಚ್ಚ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ? ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) 2009–10ನೇ ಸಾಲಿನ ಆರ್ಥಿಕ ವರ್ಷ ಮುಗಿಯುತ್ತ ಬಂದಿದ್ದರೂ ಇಲಾಖೆಯಿಂದ ಇನ್ನೂ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಿರಲು ಕಾರಣವೇನು?

ಈ) 2009–10ನೇ ಸಾಲಿನಲ್ಲಿ ಇಲಾಖಾ ವತಿಯಿಂದ ರಾಜ್ಯದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ ನೀಡುವುದು?

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :**

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಿದ್ದ ಅನುದಾನ ಮತ್ತು ಇಲ್ಲಿಯವರೆಗಿನ ಬಿಡುಗಡೆಯ ವಿವರಗಳನ್ನು ಅನುಬಂಧ–1 ರಲ್ಲಿ ವಿವರಿಸಿದೆ.

ಆ) ಕರ್ನಾಟಕ ಬಜೆಟ್ ಮಾನ್ಯುಯಲ್ ಅನುಸಾರ ಪ್ರತಿ ಸಾಲಿನಲ್ಲಿಯೂ ಇಲಾಖಾವಾರು ನಿಗದಿಪಡಿಸಲಾಗುವ ಒಟ್ಟಾರೆ ಬಜೆಟ್ ಅನುದಾನವನ್ನು ಆಧರಿಸಿ ಕಾಮಗಾರಿವಾರು ತಯಾರಿಸಲಾಗುವ ಕಾರ್ಯಕ್ರಮ ಪಟ್ಟಿ.

ಆಯವ್ಯಯದಲ್ಲಿ ಲಭ್ಯವಿರುವ ಅನುದಾನಕ್ಕೆ ಸೀಮಿತಗೊಳಿಸಿ ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಅಗತ್ಯವಿರುವ ಅವಶ್ಯಕ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅದರನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಹಾಗೂ ಹಿಂದಿನ ಸಾಲುಗಳಿಂದ ಮುಂದುವರೆದ ಕಾಮಗಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಶ್ಯಕ ಅನುದಾನ ಹಾಗೂ ಹೊಸ ಕಾಮಗಾರಿಗಳಿಗೆ ಅವಶ್ಯಕ ಅನುದಾನ ಆಧರಿಸಿ ವಾಸ್ತವಿಕ ಯೋಜನೆ ಸಿದ್ದಪಡಿಸುವುದು ಇದರ ಮೂಲ ಉದ್ದೇಶ. ಹಿಂದಿನ ಸಾಲಿನಲ್ಲಿ ಅನುಮೋದಿತ ಅಪೆಂಡಿಕ್ಸ್–ಇ ನಲ್ಲಿರುವ ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಮುಂದುವರೆದಿದ್ದು ಆಯವ್ಯಯ ಅನುಮೋದನೆ ಆದ ನಂತರ ಅಂತಹ ಕಾಮಗಾರಿಗಳಿಗೆ ವೆಚ್ಚವನ್ನು ಮಾಡಲಾಗುತ್ತದೆ.

ಇ) ಹಿಂದಿನ ಸಾಲಿನಲ್ಲಿ ಅನುಮೋದನೆಗೊಂಡು ಮುಂದುವರೆದ ಕಾಮಗಾರಿಗಳಿಗೆ ಆದ್ಯತೆ ನೀಡಿ ಆಯವ್ಯಯದಲ್ಲಿ ಇಲಾಖೆಗೆ ನಿಗಧಿಪಡಿಸ ಲಾಗುವ ಅನುದಾನದಲ್ಲಿ ಈ ಮುಂದುವರೆದ ಕಾಮಗಾರಿಗಳಿಗೆ ಅನುದಾನ ವನ್ನು ಒದಗಿಸಲಾಗಿದೆ. ಆಯವ್ಯಯದಲ್ಲಿ ಇಲಾಖೆಗೆ ನಿಗಧಿಪಡಿಸಲಾಗಿರುವ ಅನುದಾನದಲ್ಲಿ ಯಾವುದೇ ಅನುದಾನ ಉಳಿಕೆಯಾಗಿರುವುದಿಲ್ಲವಾದ್ದರಿಂದ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಈ) 2009–10ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

| ಲೆಕ್ಕ ಶೀರ್ಷಿಕೆ | ಕಾಮಗಾರಿಗಳ ಸಂಖ್ಯೆ |
|---|---|
| 5054–ಇತರೆ ರಸ್ತೆ ನಿರ್ಮಾಣ | 1909 |
| 5054–ನಬಾರ್ಡ್ ರಸ್ತೆ | 4199 |
| ವಿಶೇಷ ಘಟಕ ಯೋಜನೆ | 1067 |
| ಗಿರಿಜನ ಉಪಯೋಜನೆ | 580 |
| ವಿಶೇಷ ಅಭಿವೃದ್ಧಿ ಯೋಜನೆ (ಡಾ.ನಂಜುಂಡಪ್ಪ ವರದಿ ಆಧಾರಿತ) | 704 |
| ಸುವರ್ಣ ವಿಕಾಸ ರಸ್ತೆ | 370 |
| 4059– ಇಲಾಖಾ ಕಟ್ಟಡಗಳು | 1000 |
| 4216– ವಸತಿ ಗೃಹಗಳು | 309 |

ಅನುಬಂಧ– 1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 654ಕ್ಕೆ ಉತ್ತರ

**(Rs. In Lakhs)**

| Sl. No. | Head of Account | Grant for 2009-10 | Releases till date |
|---|---|---|---|
| 1 | 2 | 3 | 4 |
| I.1 | 5054 R&B (Plan) | 36129.66 | 35029.66 |
| | 5054- Panchalinga Dharshana | 6000.00 | 6000.00 |
| | 5054- ORF Concorence given by FD for works included in A-E Part I | 3134.00 | |
| | **Total grant available under 5054 R&B** | **45263.66** | **41029.66** |
| 2 | 5054 Nabard Rurak Roads | 21870.40 | 21870.40 |
| 3 | 5054 Central Road Fund | 20000.00 | 17742.24 |
| | **Special Development Plan (DR.D.M)** | | |
| 4 | 5054-04-800-1-09-133 Dr.D.M. Nanjundappa | 5000.00 | 4684.00 |
| 5 | 5054-04-800-3-01-133 NABARD | 8000.00 | 4671.77 |
| 6 | 5054-80-190-0-01-133 KRDCL | 10000.00 | 0.00 |
| | **5054- (Plan) SCSP** | | |
| 7 | 5054-03-0337-0-02-422-SCP-ORF | 5000.00 | 3100.00 |
| 8 | 5054-04-800-3-01-422-NABARD Roads | 4381.60 | 4381.60 |

| | | | |
|---|---|---|---|
| | **5054- (Plan) TSP** | | |
| 9. | 5054-03-337-0-02-423-TSP-ORF | 1382.64 | 1099.64 |
| 10 | 5054-04-800-3-01-423-TSP-NABARD | 1500.00 | 1500.00 |
| 11 | 3054 (Plan) "Mukhya Mantri Gremeena Raste Abhivruddhi Yojane" | 20000.00 | 17900.00 |
| 12 | 5054-04-800-1-09-172 Suvarna Rasthe Vikasa Yojane | 10000.00 | 4436.77 |
| 13 | 3054-04-105-1-01-200 12th Finance Commission | 14615.00 | 7715.00 |
| 14 | 3054-03-337-0-05-200 (Plan) State Highway Maintenance | 5000.00 | 3600.00 |
| 15 | 3054-03-337-0-05-200 (Plan) State Highway Bridge Maintenance | 596.46 | 0.00 |
| | **Roads Total** | **172609.76** | **133731.08** |
| II.2 | Buildings (Plan) excluding Judiciary | | |
| a | 4059-80-051-0-29-386 | 15350.00 | 12050.00 |
| | Concurrence given by FD for works included in A-E Part works | 4508.00 | |
| | Reappropriated from Dharwad & Gulbarga Circuit Bench to A-E Part works under 4059 (Plan) | 1000.00 | |
| | Reappropriated from | 1000.00 | |

| | | | |
|---|---|---|---|
| | H/A 4216 (Plan) Residential Bldgs to A-E Part I works under 409 (Plan) | | |
| | **Total Grant available under 4059 (Deptl bldgs)** | **21858.00** | **12050.00** |
| b | 4059-80-051-0-30-386 | 2200.00 | 500.00 |
| c | 4059 Dharwad Gulbarga Circuit Bench | 3200.00 | 2000.00 |
| | **Rs 1000 lakh Reappropriated to 4059 (4200-1000)** | | |
| | 4059-80-051-0-40-386-Belgaum Suvarna Soudha. | 6200.00 | 5251.00 |
| | **4059 Total:** | **33458.00** | **19801.00** |
| d | 4216-01-700-2-01-386 Housing | 5600.00 | 4600.00 |
| | **Rs 1000 lakh Resppropriated to 4059 (6600-1000)** | | |
| | 4216. HSR Layout | 1500.00 | 170.00 |
| e | 2059 | 300.00 | 240.00 |
| f | 2216 | 400.00 | 276.00 |
| 3 | Buildings (Non Plan) | | |
| a | 2059-80-053-4-00-200 | 13101.17 | 10907..17 |
| b | 2059-80-053-5-02-200 12th Finance | 1320.00 | 1105.00 |
| c | 2216-01-700-3-01-200 | 5943.30 | 5658.30 |
| | **Buildings Total** | **61622.47** | **42757.47** |
| | **Roads, Bridges & Bldgs. Total** | **234232.23** | **176488.55** |